ಅಧ್ಯಕ್ಷರು:- ಜನರ ಆಸ್ಪತ್ರೆಗಾದರೆ ಜನಗಳು ಅರ್ಜಿ ಕೊಟ್ಟು ಕೇಳಬಹುದು, ಆದರೆ, ಜಾನುವಾರುಗಳಿಗೆ ಕೇಳುವುದಕ್ಕೆ ಬರುವುದಿಲ್ಲ. ಜಾನುವಾರುಗಳ ಸಂಖ್ಯೆ ನೋಡದೆ ಒತ್ತಡಕ್ಕೆ ಕೊಟ್ಟುಬಿಟ್ಟರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ಹಿಂದೆ ಆಗಿರತಕ್ಕಂಥ ಎಲ್ಲಾ ತಪ್ಪುಗಳನ್ನು ಸರಿಪಡಿಸಿ ಒಂದು ವೈಜ್ಞಾನಿಕ ಸರ್ವೇ ಮಾಡಿಸಿದ್ದೇವೆ. ಅದರ ಆಧಾರದ ಮೇಲೆ ಎಲ್ಲೆಲ್ಲಿ ಪ್ರಾದೇಶಿಕ ವ್ಯತ್ಯಾಸ ಇದೆಯೋ ಅದನ್ನು ಸರಿಪಡಿಸಿ ಮಾಡಿಕೊಡುತ್ತೇವೆ.

ವಿಷಯ:- ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆ.

51(645)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ 31-1-1997ರ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) ಕೈಗೊಳ್ಳಲಾದ ಕಾಮಗಾರಿಗಳ ಸಹಿತ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ 31-1-1997ರ ಅಂತ್ಯದವರೆಗೆ ರೂ. 259.05 ಲಕ್ಷ ಹಣ ಬಿಡುಗಡೆಯಾಗಿರುತ್ತದೆ.

ಆ) ಕಾಮಗಾರಿ ಕೈಗೊಳ್ಳಲಾದ ಬಗ್ಗೆ ತಾಲ್ಲೂಕುವಾರ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಕೈಗೊಳ್ಳಲಾದ ಕಾಮಗಾರಿಗಳ ತಾಲ್ಲೂಕುವಾರು ವಿವರ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಮಂಜೂರಾದ ಅಂದಾಜುಪಟ್ಟಿ ಮೊತ್ತ	1996-97ನೇ ಸಾಲಿನಲ್ಲಿ ಅನುದಾನದ ಲಕ್ಷ ರೂ.ಗಳಲ್ಲಿ	96-97ನೇ ಸಾಲಿನಲ್ಲಿ 1-97ರವರೆಗೆ ಆಗಿರುವ ವೆಚ್ಚ	ಒಟ್ಟು ಮೊತ್ತ
1	2	3	4	5	6
1.	4059 ಲೋ.ಇ. ಮೇಲಣ ಬಂಡವಾಳ ವೆಚ್ಚ-2 ಅಗ್ನಿಶಾಮಕ ಮಡಿಕೇರಿ ಕ್ಷೇತ್ರ. ಮಡಿಕೇರಿಯಲ್ಲಿ ಅಗ್ನಿಶಾಮಕ ನಿಯಂತ್ರಣ ಕಟ್ಟಡ ನಿರ್ಮಾಣ	10.00	5.00	-	-
2.	ಸೋಮವಾರ ಪೇಟೆಯಲ್ಲಿ ಮಿನಿ ವಿಧಾನಸೌಧದ ನಿರ್ಮಾಣ.	40.00	1.00	2.478	50.182
3.	4059 ಲೋ.ಇ. ಮೇಲಣ ಬಂಡವಾಳ ವೆಚ್ಚ ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚ ವೈದ್ಯಕೀಯ ವಿರಾಜಪೇಟೆ ಕ್ಷೇತ್ರ-ವಿರಾಜಪೇಟೆಯಲ್ಲಿ ಒಪಿಜಿ ಹಾಗೂ ಎಕ್ಕರೆ 20 ಬ್ಲಾಕ್ ನಿರ್ಮಾಣ	10.00	7.00	0.995	0.995
4.	4059 ಲೋ.ಇ. ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚ ನ್ಯಾಯಪಾಲಿನ ವಿರಾಜಪೇಟೆ ಕ್ಷೇತ್ರ ವಿರಾಜಪೇಟೆಯಲ್ಲಿ ಸಿವಿಲ್ ಕೋರ್ಟ್ ಕಟ್ಟಡ ನಿರ್ಮಾಣ (1ನೇ ಅಂತಸ್ತಿನಲ್ಲಿ).	25.00	5.00	0.884	-
5.	4210 ವೈದ್ಯಕೀಯ ಮತ್ತು ಜನಾರೋಗ್ಯ ಬಂಡವಾಳ ಮತ್ತು ನಗರಾಗೋಗ್ಯ ಮತ್ತು ಮಡಿಕೇರಿ ಕ್ಷೇತ್ರ-ಮಡಿಕೇರಿಯಲ್ಲಿ ಜಿಲ್ಲಾ ಆಸ್ಪತ್ರೆಗೆ ಹೊಸ ರೀತಿಯ ಅಡುಗೆ ಕೋಣೆ ನಿರ್ಮಾಣ.	9.00	5.00	2.910	6.00

1	2	3	4	5	6
6.	ಸೋಮವಾರ ಪೇಟೆ ಕ್ಷೇತ್ರ ನೋ.ಪೇಟೆಯಲ್ಲಿ 140 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ವಿಸ್ತರಣೆ ನೆಲ ಅಂತಸ್ತು ಕಟ್ಟಡ ನಿರ್ಮಾಣ.	27.00	17.50	12.688	23.34
7.	ವಿರಾಜಪೇಟೆ ಕ್ಷೇತ್ರ ಆಸ್ಪತ್ರೆ ವಿಸ್ತರಿಸುವುದು (1ನೇ ಹಂತ) ಮಕ್ಕಳ ವಾರ್ಡ್ ಮತ್ತು ರಕ್ತ ಶೇಕರಣ ಕೊಠಡಿ.	20.00	13.60	3.399	6.073
8.	ವಿರಾಜಪೇಟೆಯಲ್ಲಿ ಒ.ಪಿ.ಡಿ ಮತ್ತು ಮೆಟರ್‌ನಿಟಿ ಬ್ಲಾಕ್ ನಿರ್ಮಾಣ.	10.00	7.00	-	-
9.	4202 ಶಿಕ್ಷಣ, ಕಲೆ ಮತ್ತು ಸಂಸ್ಕೃತಿ-ಸೋಮವಾರ ಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿ ಪ್ರಥಮ ದರ್ಜೆ ಸರ್ಕಾರಿ ಕಾಲೇಜು ವಿಭಾಗ ಕಟ್ಟಡ ನಿರ್ಮಾಣ.	27.00	5.00	-	-
	ವಿರಾಜಪೇಟೆಯಲ್ಲಿ ಸಿವಿಲ್ ಕೋರ್ಟ್ ಕಟ್ಟಡ ನಿರ್ಮಾಣ (1ನೇ ಅಂತಸ್ತಿನಲ್ಲಿ)	15.00	8.00	13.334	13.694
	ಮಡಿಕೇರಿಯಲ್ಲಿ ಜಿಲ್ಲಾ ಆಸ್ಪತ್ರೆಗೆ ಹೊಸ ರೀತಿಯ ಅಡುಗೆ ಕೋಣೆ ನಿರ್ಮಾಣ.	1.00	6.00	2.918	6.00
	ಸೋಮವಾರಪೇಟೆಯಲ್ಲಿ 140 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ವಿಸ್ತರಣೆ ನೆಲ ಅಂತಸ್ತು ಕಟ್ಟಡ ನಿರ್ಮಾಣ.	7.50	11.50	12.688	23.340
	ವಿರಾಜಪೇಟೆ ಜನರಲ್ ಆಸ್ಪತ್ರೆ ವಿಸ್ತರಿಸುವುದು (1ನೇ ಹಂತ) ಮಕ್ಕಳ ವಾರ್ಡ್ ಮತ್ತು ರಕ್ತ ಶೇಕರಣಾ ಕೊಠಡಿ.	0.00	13.00	3.399	6.673

1	2	3	4	5	6
10.	4202-03-800-02- 1-ಸೋಮವಾರಪೇಟೆ ತಾಲೂಕು ಕುಂಟಿಗೆಯ ಹಾಕಿ ಕ್ರೀಡಾಂಗಣ ಅಭಿವೃದ್ಧಿ.	-	7.00	6.658	6.658
11.	4202 ಶಿಕ್ಷಣ, ಕಲೆ ಮತ್ತು ಸಂಸ್ಕೃತಿ-ವಿಶ್ವಬ್ಯಾಂಕ್ ಸಹಾಯಕ ಯೋಜನೆ ಸಂಪುಟ-ಕುಶಾಲನಗರದಲ್ಲಿ ಪಾಲಿಟೆಕ್ನಿಕ್ ಕಟ್ಟಡಕ್ಕೆ ಒಂದನೇ ಮಹಡಿ ನಿರ್ಮಾಣ.	10.00	5.00	0.071	0.071
12.	4210 ವಸತಿಗೃಹ ನಿರ್ಮಾಣದ ಮೇಲಿನ ಬಂಡವಾಳ ವೆಚ್ಚ ವಿರಾಜಪೇಟೆಯಲ್ಲಿ ಸಿವಿಲ್ ನ್ಯಾಯಾಧೀಶರ ವಸತಿಗೃಹ ನಿರ್ಮಾಣ.	6.00	-	2.045	2.370
13.	4210 ವಸತಿಗೃಹ ನಿರ್ಮಾಣ ಮಡಿಕೇರಿ ಕ್ಷೇತ್ರ-ಮಡಿಕೇರಿಯಲ್ಲಿನ ಹೆಚ್ಚಿನ ಮುನ್ಸಿಫ್ ಹಾಗೂ ಜೆ.ಎಂ.ಎಫ್.ಸಿ. ವಸತಿಗೃಹ ನಿರ್ಮಾಣ.	4.80	3.00	1.304	3.247
14.	4211 ಕುಟುಂಬ ಕಲ್ಯಾಣ ಮೇಲಣ ಬಂಡವಾಳ ವೆಚ್ಚ 100 ಆಯ್ದ ಪ್ರದೇಶಗಳ ಯೋಜನೆ ಕಾರ್ಯಕ್ರಮ-2 ವಿಶ್ವಬ್ಯಾಂಕ್ ನೆರವಿನ ನಿರ್ಮಾಣ ಭಾರತೀಯ ಜನಸಂಖ್ಯೆ ಯೋಜನೆ ಮಡಿಕೇರಿ ಕ್ಷೇತ್ರ-ಜಿಲ್ಲಾ ಆಸ್ಪತ್ರೆಗೆ ಸೇರಿದ ಎ.ಎನ್.ಎಂ. ಟ್ರೈನಿಂಗ್ ಸೆಂಟರ್ ನಿರ್ಮಾಣ.	40.00	30.00	13.841	13.876
15.	ಮಡಿಕೇರಿಯಲ್ಲಿ ಜಿಲ್ಲಾ ತರಬೇತಿ ಕೇಂದ್ರ ನಿರ್ಮಾಣ.	33.40	10.00	-	-

1	2	3	4	5	6
16.	4059 ಲೋ.ಇ. ಮೇಲಣ ಬಂಡವಾಳ ವೆಚ್ಚ-2 ಅಗ್ನಿಶಾಮಕ-ಮಡಿಕೇರಿ ಕ್ಷೇತ್ರ ಮಡಿಕೇರಿಯಲ್ಲಿ ಅಗ್ನಿಶಾಮಕ ನಿಯಂತ್ರಣ ಕಟ್ಟಡ ನಿರ್ಮಾಣ.	10.00	5.00	-	-
17.	4059 ಲೋ.ಇ. ಬಂಡವಾಳ ವೆಚ್ಚ ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚ ವೈದ್ಯಕೀಯ ವಿರಾಜಪೇಟೆ ಕ್ಷೇತ್ರ-ವಿರಾಜಪೇಟೆಯಲ್ಲಿ ಒ.ಪಿ.ಡಿ. ಹಾಗೂ ಎಕ್ಸರೆ 20 ಬ್ಲಾಕ್ ನಿರ್ಮಾಣ.	10.00	7.00	0.995	0.995
17.ಎ.	ಸೋಮವಾರಪೇಟೆಯಲ್ಲಿ ಮಿನಿ ವಿಧಾನಸೌಧದ ನಿರ್ಮಾಣ.	10.00	1.00	1.428	53.6332
18.	5054 ರಸ್ತೆ ಮತ್ತು ಸೇತುವೆಗಳು-03 ರಾಜ್ಯ ಮಾರ್ಗ-01 ಡಾಂಬರೀಕರಣ, ವಿರಾಜಪೇಟೆ ಕ್ಷೇತ್ರ-ವಿರಾಜಪೇಟೆ ನಗರದ ಲೋ.ಇ. ಮುಖ್ಯ ರಸ್ತೆ ದುರಸ್ತಿ ಹಾಗೂ ಆಯ್ದ ಭಾಗಗಳ ಡಾಂಬರೀಕರಣ.	5.00	0.40	0.05	0.05
19.	5054 ರಸ್ತೆ ಮತ್ತು ಸೇತುವೆಗಳು-03-ರಾಜ್ಯ ಮಾರ್ಗ-02 ಇತರ ರಸ್ತೆಗಳು ಸೋಮವಾರಪೇಟೆ ಕ್ಷೇತ್ರ-ಸೋಮವಾರಪೇಟೆ ತಾಲ್ಲೂಕು ಕುಶಾಲನಗರ ಸಿದ್ದಾಪುರ ರಸ್ತೆ 0 ರಿಂದ 10 ರಲ್ಲಿ ಆರಿಸಿದ ಭಾಗಗಳ ಅಭಿವೃದ್ಧಿ.	8.00	-	0.370	9.338
20.	5054 ರಸ್ತೆ ಮತ್ತು ಸೇತುವೆ ಸೋಮವಾರ ಪೇಟೆ ಕ್ಷೇತ್ರ ವಿರಾಜಪೇಟೆ ತಾಲ್ಲೂಕು ಮಡಿಕೇರಿ, ಮಾಕುಟ್ಟ ರಸ್ತೆಯ ಅಭಿವೃದ್ಧಿ 50 ಕಿಮೀ ರಿಂದ 69.70 ರವರೆಗೆ ಅಭಿವೃದ್ಧಿ.	10.00	6.00	3.687	12.764

1	2	3	4	5	6
21.	5054 ರಸ್ತೆ ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ 101 ಇತರೆ ರಸ್ತೆ ಹೆಚ್ಚುವರಿಯಾಗಿ ತೆಗೆದಿಟ್ಟುಕೊಂಡ ಕಾಮಗಾರಿ ಮಡಿಕೇರಿ ವಿಧಾನ ಸಭಾ ಕ್ಷೇತ್ರ ಮಡಿಕೇರಿ-ಕೊಡಗು ಜಿಲ್ಲಾ ಮಡಿಕೇರಿ ನಗರದ ಲೋ.ಇ.ಗೆ ಸೇರಿದ ಮುಖ್ಯ ರಸ್ತೆಗಳ ಸುಧಾರಣೆ ಹಾಗೂ ಡಾಂಬರೀಕರಣ.	0.00	0.40	3.642	3.612
22.	ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಮಾದಾಪುರ, ಬಿಳಿಗೇರಿ ಕಿದಗದದಿವಾರು ರಸ್ತೆ ಕಿಮೀ, 15.6ರವರೆಗೆ ಆಯ್ದ ಭಾಗಗಳಲ್ಲಿ ಅಭವೃದ್ಧಿ ಹಾಗೂ ಡಾಂಬರೀಕರಣ 0.80 ರಿಂದ 5.00 ರವರೆಗೆ	2.00	0.20	-	-
23.	ಸೋಮವಾರಪೇಟೆ ಶಂತಳ್ಳಿ, ಕುಂಬಳ್ಳಿ, ರಸ್ತೆ ಕಿಮೀ 6.00 ರಿಂದ 10.0 ರವರೆಗೆ ಹಾಳಾದ ಭಾಗಗಳಿಗೆ ಡಾಂಬರೀಕರಣ ಮತ್ತು ಪುಷ್ಪಗಿರಿ ಕೂಡು ರಸ್ತೆಗೆ ಆಯ್ದ ಭಾಗಗಳಿಗೆ ಡಾಂಬರೀಕರಣ 0.00	3.00	0.50	1.174	1.474
24.	ಚೆನ್ನಂಗೋಲಿ ಬಾಳೆಲೆ ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿ 4.00 ರಿಂದ 7.00 ರವರೆಗೆ ಸುಧಾರಣೆ ಹಾಗೂ ಡಾಂಬರೀಕರಣ	5.00	0.40	-	-
25.	ತತಿಮಿತಿ, ಪಾಲಿಬೆಟ್ಟ ಮತ್ತು ಗೋಣಿಕೊಪ್ಪ ಹಾಗೂ ಅಮ್ಮಕ್ಕಿ ರಸ್ತೆಯ ಸುಧಾರಣೆ ಹಾಗೂ ಡಾಂಬರೀಕರಣ.	5.00	0.40	1.428	1.428

1	2	3	4	5	6
26.	ರಸ್ತೆ ಮತ್ತು ಸೇತುವೆ ನಿರ್ಮಾಣ ವಿ. ಕ್ಷೇತ್ರ ವಿರಾಜಪೇಟೆ ತಾ:ನಲ್ಲಿ ಅಮ್ಮತ್ತಿ ಮೂರ್ನಾಡು ರಸ್ತೆ ಕಿಮೀ 0.20ನಲ್ಲಿರುವ ಸೇತುವೆಯ ಪುನರ್ ನಿರ್ಮಾಣ.	24.00	3.00	9.252	41.583
27.	5054 ರಸ್ತೆ ಮತ್ತು ಸೇತುವೆ ನಿರ್ಮಾಣ ಮಡಿಕೇರಿ ಕ್ಷೇತ್ರ ಹಾವೇರಿ ನದಿಗೆ ಅಡ್ಡಲಾಗಿ ಮೂರ್ನಾಡು ಬಲದುರಿ ರಸ್ತೆ 3.34 ನಲ್ಲಿ ಒಂದು ಸೇತುವೆ ನಿರ್ಮಾಣ	75.00	10.00	9.988	118.237
28.	ಮೈಸೂರು ಬಂಡವಾಳ ರಸ್ತೆಯ 137.90 ದೇವರಕೊಲ್ಲಿ ಸೇತುವೆ ನಿರ್ಮಾಣ.	10.00	1.00	10.629	14.689
29.	-ಅದೇ- ಕಿಮೀ. 128.90 ಸೇತುವೆ ನಿರ್ಮಾಣ.	9.00	3.50	5.063	7.931
30.	5054 ರಸ್ತೆ ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ ಮೇಲಣ ಕಾರ್ಯಕ್ರಮ ಮಡಿಕೇರಿ ಕ್ಷೇತ್ರ-ಸಿದ್ಧಾಪುರ ಮೈಸೂರು ರಸ್ತೆಯ ಆಯ್ದ ಭಾಗಕ್ಕೆ ಅಭಿವೃದ್ಧಿ ಕಿಮೀ. 29 ರಿಂದ 30 ರವರೆಗೆ ಮತ್ತು 1 ಮತ್ತು 4 ರಲ್ಲಿ ಜಲ್ಲಿ ಹಾಕಿ ಮೆಟಲಿಂಗ್ ಅಭಿವೃದ್ಧಿ.	4.00		0.498	3.955
31.	ಸಿದ್ದಾಪುರ ಪಾಲಿಬೆಟ್ಟ ರಸ್ತೆಗಳಿಗೆ ಭಾಗಗಳಿಗೆ ಅಭಿವೃದ್ಧಿ 2 ರಿಂದ 4.2 ರಿಂದ 4.6 ಹಾಗೂ 7.50 ರಿಂದ 5.05 ರವರೆಗೆ ಮೆಟಲಿಂಗ್ ವಿರಾಜಪೇಟೆ.	5.00	-	0.416	3.036

1	2	3	4	5	6
33.	ಅಮೃತ್ತಿ ಹೊಸೂರು, ಗೋಣಕೊಪ್ಪ ರಸ್ತೆಯ ಆಯ್ದ ಭಾಗಗಳಿಗೆ ಅಭಿವೃದ್ಧಿ 0.00 ರಿಂದ 10.0 ರವರೆಗೆ ಬದಿಗಳಿಗೆ ಮೆಟಾಲಿಂಗ್ ವಿರಾಜಪೇಟೆ ತಾ:	4.00	-	-	2.078
34.	ಮಡಿಕೇರಿ ಕಡಮಕಲ್ ರಸ್ತೆಯ ಕಿಮೀ 12.5 ರಲ್ಲಿ ಸೇತುವೆ ನಿರ್ಮಾಣ (ಬದಲಿ ಕಾಮಗಾರಿಯ ಪ್ರಸ್ತಾವನೆಯಡಿ ಜಂಟಿ ಕಾಮಗಾರಿ 1 ಕಿಮೀ 1.30 ರಿಂದ 12.60 ರವರೆಗೆ ಅಭಿವೃದ್ಧಿ ಬದಲಿ ಕಾಮಗಾರಿ.	5.00	-	3.084	4.108
35.	ಸೋಮವಾರಪೇಟೆ ಯಲಕನೂರು ಕಣಿವೆ ರಸ್ತೆ ಅಭಿವೃದ್ಧಿ 13.0 ರಿಂದ 15.0 ರವರೆಗೆ.	6.00	-	0.873	4.887
36.	ಮಕಾಪುರ ಕಂತಳ್ಳಿ ಸೂರ್ಲಜ್ಜಿ ರಸ್ತೆ ಮೂಲಕ ಕಿಮೀ 7.ರ ಸೇತುವೆ ನಿರ್ಮಾಣ (ಮೋರಿ ನಿರ್ಮಾಣ)	5.00	-	2.098	6.604
37.	ಕನುಬಾಡಿ ದೇವರಪುರ ಕಲ್ಲಳ್ಳಿ ರಸ್ತೆ ಮೆಟಾಲಿಂಗ್ ಮತ್ತು ಡಾಂಬರೀಕರಣ 1.5 ರಿಂದ 1.25 ರವರೆಗೆ ಮೆಟಾಲಿಂಗ್.	2.00	-	0.02	0.978
38.	ಪೊನ್ನಂಪೇಟೆ ಈತನೂರು ತಾ: ರಸ್ತೆ ಮರು ಡಾಂಬರೀಕರಣ ಭಾಗಗಳಲ್ಲಿ 3.00 ರಿಂದ 4.00 ಮತ್ತು 8.10 ರಿಂದ 8.20 ರವರೆಗೆ	2.00	-	2.00	2.00

1	2	3	4	5	6
39.	ವಿರಾಜಪೇಟೆ ನಾಲ್ಕು ನಾಡು ರಸ್ತೆ ಮೆಟಾಲಿಂಗ್ ಮಾಡಿ ವಿಸ್ತಾರವಾದ ಭಾಗಗಳಲ್ಲಿ ಮರು ಡಾಂಬರೀಕರಣ ಮತ್ತು ಹಾಳಾದ ಭಾಗಗಳಿಗೆ ಮರು ಡಾಂಬರೀಕರಣ ಕಿಮೀ 1 ರಿಂದ 2.2. ಮತ್ತು 3.12 ರಿಂದ 3.84 ರವರೆಗೆ ಇಬ್ಬದಿಳಿಗೆ ಮೆಟಾಲಿಂಗ್ ಮತ್ತು ಡಾಂಬರೀಕರಣ.	3.00	-	0.932	2.945
40.	ಕನಂಬಾಡಿ ದೇವರಪುರ ರಸ್ತೆಯ ಕಿಮೀ 0 ರಿಂದ 0.7 ರವರೆಗೆ ಮತ್ತು 7 ಮತ್ತು 9.5ರಲ್ಲಿ ಹಾಳಾದ ಭಾಗಗಳಿಗೆ ಮರು ಡಾಂಬರೀಕರಣ 504-03-037 ಮೇಲ್ದರ್ಜೆಗೇರಿದ ರಸ್ತೆ ಅಭಿವೃದ್ಧಿ ಸೋಮವಾರಪೇಟೆ ಕ್ಷೇತ್ರ.	2.00	-	7.769	7.757
41.	ಸೋಮವಾರಪೇಟೆ ಯಾಕನೂರು ಕಣಿವೆ ರಸ್ತೆ 3 ರಿಂದ 1 ರವರೆಗೆ ಆರಿಸಿದ ಭಾಗಕ್ಕೆ ಅಭಿವೃದ್ಧಿ 504-03-037 ಮೇಲ್ದಜೇಗೇರಿಸಿದ ವಿರಾಜಪೇಟೆ ಕ್ಷೇತ್ರ.	5.00	1.00	0.262	4.713
42.	ಮಕೇರಿ ಮಾಕುಟ್ಟ ರಸ್ತೆ ಕಿಮೀ. 55 ರಿಂದ 35 ರಲ್ಲಿ ಆಯ್ಕ ಭಾಗಗಳಲ್ಲಿ ರಸ್ತೆ ಡಾಂಬರೀಕರಣ.	10.00	1.50	5.915	7.356
43.	5054 ರಸ್ತೆ ಮತ್ತು ಸೇತುವೆಗಳ ಬಂಡವಾಳ ಮತ್ತು ವೆಚ್ಚ ವಿಧಾನಸಭಾ ಕ್ಷೇತ್ರವಾರು ಕಾರ್ಯಕ್ರಮ 30 ಲಕ್ಷ ಕಾರ್ಯಕ್ರಮ ಸಕಲೇಶಪುರ, ಸೋಮವಾರಪೇಟೆ, ಮಡಿಕೇರಿ ವಿರಾಜಪೇಟೆ ರಸ್ತೆಯ ಕಿಮೀ. 95.10 ರಿಂದ 108 ರವರೆಗೆ ಆಯ್ದ ಭಾಗಗಳಿಗೆ ಅಭಿವೃದ್ಧಿ.	5.00	1.50	0.511	0.511

1	2	3	4	5	6
44.	ಮೈಸೂರು ಬಂಟ್ವಾಳ ರಸ್ತೆಯ 113.0 ರಿಂದ 162. 10 ರವರೆಗೆ ಆಯ್ದ ಹಾಳಾದ ಭಾಗಗಳಿಗೆ ಮರು ಡಾಂಬರೀಕರಣ.	4.00	1.25	2.419	2.459
45.	ಕಗ್ಗೋಡು ಕಾಟಗೇರಿ ರಸ್ತೆಯ ಕಿಮೀ 2 ರಲ್ಲಿ ತಿರುವಿನ ಅಭಿವೃದ್ಧಿ	2.00	2.70	1.547	5.847
46.	ಬೆಟ್ಟಗೇರಿ ನಾಲ್ಕು ನಾಡು ರಸ್ತೆಯ ಕಿಮೀ 1.50 ರಿಂದ 29.9 ರವರೆಗೆ ರಸ್ತೆಯ ಇಬ್ಬದಿಗಳಿಗೆ ಮೆಟಾಲಿಂಗ್ ಆಯ್ದ ಭಾಗಗಳಿಗೆ ಡಾಂಬರೀಕರಣ.	1.75	0.60	1. 184	6.938
47.	ಮಡಿಕೇರಿ ಕಾಮಕಲ್ ಸುಬ್ರಹ್ಮಣ್ಯ ರಸ್ತೆಯ ಕಿಮೀ. 2.7 ರಿಂದ 2.4 ರವರೆಗೆ ಬದಿಗಳಿಗೆ ಮೆಟಲಿಂಗ್ ಡಾಂಬರೀಕರಣ ವಿಸ್ತರಿಸುವುದು.	2.00	0.65	1.252	2. 143
48.	ವಿರಾಜಪೇಟೆ ನಾಲ್ಕು ನಾಡು ರಸ್ತೆ 7.20 ರಿಂದ 14.0 ಆಯ್ದ ಭಾಗಗಳಿಗೆ ಡಾಂಬರೀಕರಣ.	1.75	0.60	1.060	1.937
49.	ಭಾಗಮಂಡಲ ಕರಿಕೆ ರಸ್ತೆ ಕಿಮೀ, 12.0 ರಿಂದ 30.30 ರವರೆಗೆ ಹಾಳಾದ ಭಾಗಗಳಿಗೆ ಮರು ಡಾಂಬರೀಕರಣ.	8.0	2.50	1.231	3. 155
50.	ಮಡಿಕೇರಿ ಭಾಗಮಂಡಲ ರಸ್ತೆ ಕಿಮೀ 5.40 ರಿಂದ 23.0 ರವರೆಗೆ ಹಾಳಾದ ಭಾಗಗಳಿಗೆ ಡಾಂಬರೀಕರಣ.	5.50	1.70	3.921	5.558

1	2	3	4	5	6
51.	ಮೈಸೂರು ಬಂಟ್ವಾಳ ರಸ್ತೆಯ ಕಿಮೀ 106 ರಿಂದ 108 ರವರೆಗೆ 112.0 ರಿಂದ 113 ರವರೆಗೆ ಆಯ್ದ ಡಾಂಬರು ಮೇಲ್ಮೈ ಡಾಂಬರೀಕರಣ.	3.50	1.00	1.623	3.405
52.	ಸಕಲೇಶಪುರ, ಸೋಮವಾರ ಪೇಟೆ, ಮಡಿಕೇರಿ ವಿರಾಜಪೇಟೆ ರಸ್ತೆಯ ಕಿಮೀ. 83.65 ರಿಂದ 85.00 ರವರೆಗೆ ಬದಿಗಳನ್ನು ವಿಸ್ತರಿಸುವ ಡಾಂಬರೀಕರಣ.	3.00	1.00	0.723	0.723
53.	ಸೋಮವಾರಪೇಟೆ, ಯಲಕನೂರು ರಸ್ತೆಯ ಕಿಮೀ. 5.00 ರಿಂದ 1 ಆಯ್ದ ಭಾಗಗಳಿಗೆ ಅಭಿವೃದ್ಧಿ.	11.50	3.50	3.137	3.137
54.	ಕನ್ನಳ್ಳಿಕಟ್ಟೆ, ಜಕ್ಕವಳ್ಳಿ, ಕೊತ್ತನಳ್ಳಿ, ಬೇರಳ್ಳಿ ಕುಮಾರಹಳ್ಳಿ ಕುಂಡಳ್ಳಿ 5.50 ರಿಂದ 7 ಮೆಟಲಿಂಗ್ ಮತ್ತು ಡಾಂಬರೀಕರಣ.	6.0	2.00	1.517	2.212
55.	ಸೋಮವಾರಪೇಟೆ ಕೊಣನೂರು ರಸ್ತೆಯ ಕಿಮೀ. 4.30 ರಿಂದ 4.0 7.40 ರಿಂದ 3.8 ರವರೆಗೆ ಬದಿಗಳನ್ನುವಿಶಾಲಗೊಳಿಸಿ ಡಾಂಬರೀಕರಣ.	3.0	1.0	0.568	0.666
56.	ಕುಶಾಲನಗರ, ಸಿದ್ದಾಪುರ ರಸ್ತೆಯ ಕಿಮೀ. 2.40 ರಿಂದ 5.00 ಹಾಳಾದ ಭಾಗಗಳಿಗೆ ಡಾಂಬರೀಕರಣ.	1.50	0.60	1.636	1.636

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೆ, ಮಾರ್ಚ್ 31-1-1997ರ ವರೆಗೆ ಜಿಲ್ಲಾ ಲೋಕೋಪಯೋಗಿ ಇಲಾಖೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆಯೆಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ 259.05 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಹೇಳಿದ್ದಾರೆ. ಈ ಹಣದಲ್ಲಿ ಎಷ್ಟು ಖರ್ಚು ಮಾಡಲಾಗಿದೆ? ಆಮೇಲೆ ಶಾಸಕರು ಹೇಳುವ ಕೆಲಸವನ್ನು ಮಾಡಿಸಲು ಒಂದು ವರ್ಷಕ್ಕೆ 30 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರ ಹೇಳಿತ್ತು, ಅದರಲ್ಲಿ ಎಷ್ಟು ಹಣವನ್ನು ಕೊಡಲಾಗಿದೆ? ನಮ್ಮ ಕೊಡಗು ಜಿಲ್ಲೆಯಲ್ಲಿ ರಸ್ತೆಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಇವೆ. ಆದುದರಿಂದ ಉಳಿದ ಸಮಯದಲ್ಲಿ ಎಲ್ಲಾ ಹಣವನ್ನು ಖರ್ಚು ಮಾಡಿ ಕೆಲಸವ ಮಾಡಿಸಲಾಗುತ್ತದೆಯೇ?

ಶ್ರೀ ಸಿ.ಎಂ. ಉದಾಸಿ:- ಮಾನ್ಯ ಅಧ್ಯಕ್ಷರೆ, 1996-97ನೇ ಸಾಲಿನಲ್ಲಿ 4 ಕೋಟಿ 49 ಲಕ್ಷ ರೂಪಾಯಿಗಳು ಮಂಜೂರಾತಿಯಾಗಿದ್ದು ಅದರಲ್ಲಿ 2 ಕೋಟಿ 59 ಲಕ್ಷ ರೂಪಾಯಿಗಳನ್ನು ಜನವರಿಯವರೆಗೆ ಬಿಡುಗಡೆ ಮಾಡಲಾಗಿದೆ. ಮಡಿಕೇರಿ ಜಿಲ್ಲೆಯಲ್ಲಿ 56 ಕಾಮಗಾರಿಗಳ ಕೆಲಸ ನಡೆಯುತ್ತಿದೆ. ಶಾಸಕರುಗಳಿಗೆ ಕೊಡತಕ್ಕಂಥ ಅನುಧಾನದಲ್ಲಿ ಈಗಾಗಲೇ 9 ಲಕ್ಷದ 50 ರೂಪಾಯಿಗಳನ್ನು ಕೊಡಲಾಗಿದೆ, ಬರುವ ವರ್ಷ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಈಗಾಗಲೇ 2 ಕೋಟಿ ಚಿಲ್ಲರೆ ಹಣವನ್ನು ಖರ್ಚು ಮಾಡಲಾಗಿದೆ ಮಾರ್ಚ್ 31ರೊಳಗೆ ಉಳಿದ 4 ಕೋಟಿ 75 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಇನ್ನು ಎರಡು ತಿಂಗಳೊಳಗೆ ಇಷ್ಟು ಹಣವನ್ನು ಖರ್ಚು ಮಾಡಿ ಕೆಲಸ ಮಾಡಿಸುವುದಕ್ಕಾಗುತ್ತದೆಯೇ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಸಿ.ಎಂ. ಉದಾಸಿ:- ಜನವರಿಗೆ 31ರ ವರೆಗೆ ಖರ್ಚಾಗಿರುವ ವಿವರಗಳನ್ನು ಕೊಡಲಾಗಿದೆ. ಇನ್ನು ಎರಡು ತಿಂಗಳಲ್ಲಿ ಕೆಲಸದ ಪ್ರಗತಿಯನ್ನು ನೋಡಿಕೊಂಡು ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪೂರ್ತಿ ಮುಗಿಸಲಾಗುತ್ತದೆ.

ವಿಷಯ:- ಬಳ್ಳಾರಿ ಜಿಲ್ಲೆಯಲ್ಲಿರುವ ಕಾರಾವಿ ಚಿಕಿತ್ಸಾಲಯ ಆಸ್ಪತ್ರೆಗಳ ಸಂಖ್ಯೆ.

52(147)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಳ್ಳಾರಿ ಜಿಲ್ಲೆಯಲ್ಲಿ ಕಾರಾವಿ ಕಾಯ್ದೆಯಡಿಯಲ್ಲಿ ಒಳಪಟ್ಟು ಕಾರ್ಮಿಕ ಒಟ್ಟು ಸಂಖ್ಯೆ ಎಷ್ಟು;

ಆ) ಕಾರಾವಿ ಕಾಯ್ದೆಯಡಿ ಮಿತಿಯನ್ನು ರೂ. 6000ಕ್ಕೆ ಹೆಚ್ಚಿಸಿರುವುದರಿಂದ ಹೆಚ್ಚಾಗಬಹುದಾದ ಕಾರ್ಮಿಕರ ಸಂಖ್ಯೆ ಎಷ್ಟು;